MYSORE LEGISLATIVE ASSEMBLY

TWENTY-SEVENTH DAY.

Sunday, 29th March 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE.

Sri ALUR HANUMANTHAPPA (Deputy Minister for Minor Irrigation).—I beg to lay the statement showing the region-wise expenditure on Communications and Buildings and Minor Irrigation and Public Health during the period from 1962-63 to 1964-65, as promised by the Minister for P. W. D. during the course of his reply to demands under P. W. D.

BUDGET ESTIMATES FOR 1964-65

Demands for Grants Nos. 6, 10, 29, 30, 45, 46 and 64

(Debate continued.)

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡ್ ನಂಬರ್ 6,10,29,30,45,46,47 ಇವುಗಳ ಬಗ್ಗೆ ನಾನು ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ಡಿಮ್ಯಾಂಡುಗಳಿಗೂ ಒಟ್ಟಾಗಿ 19,74,37,190 ರೂಪಾಯಿಗಳಿಗೆ ಈ ಸಭೆಯು ಮಂಜೂರಾತಿಯನ್ನು ಕೇಳಲಾಗಿದೆ. ಈ ತೆರಿಗೆಗಳ ವಿಷಯದಲ್ಲಿ ಹೇಳುವುದಾದರೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಮೊದಲು 20 ಪರ್ಸೆಂಟ್ ಇದ್ದುದ್ದನ್ನು 35 ಪರ್ಸೆಂಟಿಗೆ ಏರಿಸಿದ್ದಾರೆ. ಇದರಲ್ಲಿ ಸಿನಿಮೋಟೊಗ್ರಾಫ್ ಟ್ಯಾಕ್ಸನಲ್ಲಿ ಹೆಚ್ಚಿಗೆ ಟ್ಯಾಕ್ಸ್‌ಗಳನ್ನು ಹಾಕುವಂತಾದ್ದು ಏನಿದೆಯೋ ಅದು ಸಾಮಾನ್ಯ ಜನರ ಮೇಲೆ ಬೀಳುವುದರಿಂದ ಅದನ್ನು 20 ಪರ್ಸೆಂಟಿಗೆ ಇಳಿಸಬೇಕು. ಆ ತೆರಿಗೆಯನ್ನು 20 ಪರ್ಸೆಂಟಿಗಿಂತ ಜಾಸ್ತಿ ಹಾಕ ಬಾರದು. ಇಷ್ಟೇ ಅಲ್ಲದೆ ಈಗ ಬೆಂಗಳೂರಿನಲ್ಲಿ ನಡೆಯುವ ಸಿನಿಮಾಗಳಿಗೆ ಹೊಸದಾಗಿ ಒಂದು ರೂಪಾಯಿನಿಂದ ಎರಡೂವರೆ ರೂಪಾಯಿ ತೆರಿಗೆಯನ್ನು ಹಾಕಬೇಕೆಂದು ನಿಗದಿ ಮಾಡಿದ್ದಾರೆ. ಇದನ್ನು ಹಾಕುವುದಾದರೆ ಈ ಟ್ಯಾಕ್ಸ್ ಜನಸಾಮಾನ್ಯರ ಮೇಲೆ ಮತ್ತು ಕಾರ್ಮಿಕರ ಮೇಲೆ ಬಿದ್ದು ಅದನ್ನು ವಸೂಲು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಸಾಮಾನ್ಯವಾಗಿ ಮನುಷ್ಯ ಬೆಳಗಿನಿಂದ ಸಾಯಂಕಾಲದವರೆಗೆ ದುಡಿದು ಬೇಸತ್ತು ಹೋಗಿರುವುದರಿಂದ ಅವನು ಯಾವುದಾದರೂ ಒಂದು ಮನರಂಜನೆಯ ಕಾರ್ಯಕ್ರಮವನ್ನು ನೋಡುವ ಪದ್ಧತಿ ಇರುವುದರಿಂದ ಈ ಟ್ಯಾಕ್ಸ್‌ಗಳನ್ನು ಹೆಚ್ಚು ಹೆಚ್ಚು ಹಾಕುವುದರಿಂದ ಆ ಟ್ಯಾಕ್ಸ್‌ಗಳೆಲ್ಲಾ ಸಾಮಾನ್ಯ ಮನುಷ್ಯನ ಮೇಲೆ ಬೀಳುತ್ತದೆ.

†Indicates that the remarks or speeches have not been revised by the member concerned